JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕನಕದಾಸ ಮತ್ತು ಶಿಶುನಾಳ ಶರೀಫರ : ಒಂದು ಅವಲೋಕನ

**ಡಾ. ರಮೇಶ.ಡಿ**

ಕನ್ನಡ ಉಪನ್ಯಾಸಕರು, ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸಾಗರ.

ಇತಿಹಾಸದ ಪುಟ ಮನುಷ್ಯನ ಸಂಸ್ಕೃತಿ–ನಾಗರೀಕತೆಗಳ ದಾಖಲೆ. ಅವನು ಮುಗ್ಗರಿಸಿದ್ದನ್ನು, ಬಿದ್ದುದನ್ನು, ಎದ್ದುದನ್ನು, ನಡೆದುದನ್ನು, ನಾಚಿಕೆಯಿಂದ ತಲೆತಗ್ಗಿಸಿದ್ದನ್ನು, ಹೆಮ್ಮೆಯಿಂದ ಎದೆಯುಬ್ಬಿಸಿ ನಿಂತದ್ದನ್ನೂ ಈ ಎಲ್ಲವನ್ನು ತನ್ನ ಒಡಲೊಳಗಿಟ್ಟುಕೊಂಡೇ ಹಿಗ್ಗಿರುವ ಇತಿಹಾಸ ಮನುಷ್ಯನ ನಡೆದುಬಂದ ದಾರಿಯ ವ್ಯಾಖ್ಯಾನ. ಮಾನವ ಚರಿತ್ರೆಯ ಪುಟದಲ್ಲಿಯೇ ಅದರ ವರ್ತಮಾನಕ್ಕೆ ತೋರು ಬೆರಳಿದೆ. ಭವಿಷ್ಯದಲ್ಲಿ ಬಳಸಿಕೊಳ್ಳಬಹುದಾದ ಆಲೋಚನೆಗಳಿವೆ. ಮನುಕುಲ ಅಧಃಪತನದ ಕಂದಕಕ್ಕೆ ಉರುಳದಂತೆ ಎಚ್ಚರಿಸುವ ಗಂಟೆಯ ದನಿಯಿದೆ. ಮಾನವನ ಅವಿವೇಕವನ್ನು, ಅನ್ಯಾಯವನ್ನು, ಅಸಹನೆಯನ್ನು ತನ್ನಲ್ಲಿ ಗರ್ಭೀಕರಿಸಿಕೊಂಡ ಇತಿಹಾಸದಿಂದ ಕಲಿಯಬಹುದಾದ ಪಾಠ ಸಾಕಷ್ಟಿದೆ. ಈ ಎಲ್ಲ ಮಗ್ಗಲನ್ನು ತೆರೆದು ತೋರಿಸಬಲ್ಲ ಶಕ್ತಿ ಸಾಹಿತ್ಯಕ್ಕಿದೆ.

ಇಂದು ಮನುಷ್ಯನನ್ನು ಕಾಡುವ ಎರಡು ಮುಖ್ಯ ರೋಗಗಳೆಂದರೆ ಅಶಾಂತಿ ಮತ್ತು ಅತೃಪ್ತಿ. ಇವೆರಡೂ ಮೇಲ್ನೋಟಕ್ಕೆ ಬೇರೆಯಾಗಿ ಕಂಡರು, ನಮ್ಮ ಮನಃಸ್ಥಿತಿಗೆ ಸಂಬಂಧಿಸಿದ ಒಂದೇ ಸಮಸ್ಯೆ. ಮನುಷ್ಯನ ಹುಟ್ಟಿನೊಂದಿಗೆ ಬೆನ್ನಟ್ಟಿರುವ ಇದಕ್ಕೆ ಪರಿಹಾರವೆಲ್ಲಿ ಎಂದು ಕೈಚೆಲ್ಲಿ ಕೂರುವುದಕ್ಕಿಂತ, ಇದಕ್ಕೆ ಪರಿಹಾರ ಹುಡುಕುವ ಪ್ರಯತ್ನವು ಈ ಹಿಂದೆ ಎಂದಾದರೂ ನಡೆದಿದೆಯೇ ಎಂದು ಇತಿಹಾಸದ ಪುಟಗಳಲ್ಲಿ ಹುಡುಕಾಟ ನಡೆಸಬೇಕಾಗುತ್ತದೆ. ಜಾತಿಯತೆಯ ಭೂತ ಕೋಮುವಾದದ ಕಿಡಿ ಇಂದು ಮನುಷ್ಯನನ್ನೆ ಬಲಿ ತೆಗೆದುಕೊಳ್ಳುತ್ತಿದೆ. ದಿನಬೆಳಗಾದರೆ ಸಮಾಜದಲ್ಲಿ ಕಾಣುವ ಮೋಸ, ವಂಚನೆ, ಕೊಲೆ, ಸುಲಿಗೆ, ಅತ್ಯಾಚಾರ ಮುಂತಾದ ಬರ್ಬರ ವರ್ತನೆಗಳು ಮನುಷ್ಯನಿಗೇ ಮನುಷ್ಯನಲ್ಲಿ ನಂಬಿಕೆ ಕುಸಿಯುವಂತೆ ಮಾಡುತ್ತಿದೆ. ಇದಕ್ಕೆಲ್ಲ ಪರಿಹಾರ ಸೂಚಿಸಬಲ್ಲ ಹಿಲಾಲು ಹಾದಿಯನ್ನಿಂದು ನಾವು ಹುಡುಕಬೇಕಿದೆ.

ಕವಿ ಬೇಂದ್ರೆ ಹೇಳಿದ್ದರು– "ನಾವು ನಮ್ಮ ಪ್ರಾಚೀನ ಇತಿಹಾಸವನ್ನು ಸುಳ್ಳು ಸುಳ್ಳೆ ಬರೆದು ಏನು ಪ್ರಯೋಜನ? ಹಿಂದೂಸ್ತಾನದ ಪ್ರಾಚೀನ ಇತಿಹಾಸದಲ್ಲಿ ನಾವು ಬಡಿದಾಡದೆ ಇದ್ದ ವರ್ಷವೇ ಇಲ್ಲ ಅಥವಾ ಇತಿಹಾಸ ಬೇಡವಾದರೆ ಹೊಸ ಇತಿಹಾಸಕ್ಕೆ ತಳಹದಿ ಕಟ್ಟಬೇಕಾಗಿದೆ. ಹೊಸ ಇತಿಹಾಸ ಬೇಕಾದರೆ ಹೊಸ ಮನಸ್ಸು ಬೇಕು. ಹೊಸ ಮನುಷ್ಯನಾಗಬೇಕು. ನಮ್ಮ ನಮ್ಮ ಇಚ್ಛೆಯನ್ನು ತಿದ್ದಿಕೊಳ್ಳಲಾರದೆ ಹೊರಗೆ ಹೊಸ ಇತಿಹಾಸ ಬರಲಾರದು. ಆಗಿ ಹೋದ ಇತಿಹಾಸವನ್ನು ಬದಲಿಸಲು ಸಾಧ್ಯವಿಲ್ಲ. ನಾಳೆ ಬರಲಿರುವ ಇತಿಹಾಸವನ್ನು ಬದಲು ಮಾಡಬಹುದು. ನಾಳಿನ ಒಳ್ಳೆಯ ಇತಿಹಾಸಕ್ಕೆ ಇಂದು ಒಳ್ಳೆಯ ತಳಹದಿ ಹಾಕಬೇಕು. ಹೊಸ ಚರಿತ್ರೆ

ಬರೆಯಬೇಕಾದರೆ ಮನುಷ್ಯರು ಪರಸ್ಪರ ಬಡಿದಾಟವನ್ನು ನಿಲ್ಲಿಸಿ ಪರಸ್ಪರ ಸಹನೆ ಸಹಭಾವದ-ಭೂಮಿಕೆಯತ್ತ ಕಣ್ಣು ಹೊರಳಿಸಬೇಕು. ನಿಗರ್ವಭಾವದಿಂದ ಒಂದುಗೂಡಬೇಕು"[೧] ಎಂದು.

ಅಂತೆಯೇ ಕನಕದಾಸ ಮತ್ತು ಶಿಶುನಾಳ ಶರೀಫರ ಸಾಹಿತ್ಯದ ಪ್ರಸ್ತುತತೆ ಇರುವುದೇ ಇಲ್ಲಿ. ಯಾಕೆಂದರೆ ಈ ಇಬ್ಬರ ಸಾಹಿತ್ಯವು ಹೊಸ ಇತಿಹಾಸವನ್ನು ಮಾನವ ಸಮುದಾಯದಲ್ಲಿ ಕಟ್ಟಿ ನಿರ್ಮಿಸಿದ ಸಾಹಿತ್ಯ. ನಿಜವಾದ ಸಾಹಿತ್ಯ ಅಸ್ಥೆ ತಾಳುವುದು ಮನುಷ್ಯನಲ್ಲಿ. ಮನುಷ್ಯನಿಂದ ಸೃಷ್ಟಿಯಾದ ಸಾಹಿತ್ಯದ ಮುಖ್ಯ ಕಾಳಜಿ ಮನುಷ್ಯನೇ. ಒಂದು ಭಾಷೆಯ ಸಾಹಿತ್ಯವೆಂದರೆ ಒಂದು ಜನಾಂಗದ ಸಾಂಸ್ಕೃತಿಕ-ಸಾಮಾಜಿಕ ರಾಯಭಾರಿ ಪ್ರತಿನಿಧಿ. ಕನಕದಾಸ ಮತ್ತು ಶರೀಫರ ಸಾಹಿತ್ಯವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಶಯಗಳ ಇತಿಹಾಸವನ್ನು ಕಟ್ಟಿಕೊಡುವ ಇತಿಹಾಸಜ್ಞರ ದೃಷ್ಟಿಗಿಂತ ಸಾಮಾಜಿಕ-ಸಾಂಸ್ಕೃತಿಕ ಆಶಯವನ್ನು ಸೆರೆಹಿಡಿಯುವ ವಿಮರ್ಶಕನ ದೃಷ್ಟಿಯೇ ಪ್ರಮುಖ. ಆದರೆ ಇತಿಹಾಸ ಪ್ರಜ್ಞೆಯಿಂದ ಬರೆಯುವ ಕೃತಿ ಎಲಿಯಟ್ ಹೇಳುವ ಹಾಗೆ- ಪರಂಪರೆಯ ಜೊತೆಗಿನ ಸಂಬಂಧವನ್ನು ವರ್ತಮಾನದೊಂದಿಗೆ ಜೋಡಿಸಿಕೊಳ್ಳುತ್ತ ತನ್ನೊಳಗೇ ತನ್ನ ಕಾಲದ ಸಮಸ್ತ ಮುಖಗಳನ್ನೂ ಗ್ರಹಿಸಿಕೊಂಡೇ ಪ್ರಕಟವಾಗುತ್ತ ಮತ್ತು ತನ್ನ ಕಾಲದ ಸತ್ಯವನ್ನು ಶೋಧಿಸಿಕೊಳ್ಳುತ್ತಲೇ ಸಾರ್ವಕಾಲಿಕ ಸತ್ಯಾನ್ವೇಷಣೆಯನ್ನು ಮಾಡುವುದರಿಂದ ವರ್ತಮಾನಕ್ಕೂ ಸಲ್ಲುತ್ತದೆ. ಭೂತ-ವರ್ತಮಾನದ ಗಡಿಯನ್ನು ಮೀರಿ ಮುಂಚಾಚುತ್ತದೆ.

ಇಲ್ಲಿ ಮುಖ್ಯವಾದ ಒಂದು ಸಂಗತಿಯನ್ನು ಗಮನಿಸಬಹುದು. ಕಾಲಬದಲಾದರೂ ಮನುಷ್ಯನ ಬದುಕನ್ನು ಕುರಿತು ಹೇಳುವ ಮೂಲಭೂತ ಪ್ರಶ್ನೆಗಳು ಬದಲಾಗುವುದಿಲ್ಲ. ಮತ್ತೆ ಮತ್ತೆ ಎದುರು ನಿಲ್ಲುವ ಪ್ರಶ್ನೆಗಳು ಹಾಗು ಅವುಗಳಿಗೆ ಈ ಮೊದಲೆ ಕಂಡುಕೊಂಡ ಉತ್ತರಗಳನ್ನು ಅನುಭಾವಿಗಳು-ಸಂತರು ತಮ್ಮ ಬದುಕಿನ ಪ್ರಯೋಗಶಾಲೆಯ ಪ್ರಯೋಗದ ಮೂಲಕವೇ ಪರಿಶೀಲಿಸಿ 'ನಿಜ'ವನ್ನು ಅರಿಯುವ ಪ್ರಯತ್ನ ಮಾಡುತ್ತಾರೆ. ವಾಸ್ತವವಾಗಿ ವ್ಯಕ್ತಿಗಳ ನೆಲೆಯಲ್ಲಿ ಕಂಡುಕೊಂಡ ಸತ್ಯದ ದರ್ಶನವು ಒಂದೇ ಆಗಿದ್ದರೂ ಅವುಗಳ ಬೇರೆ ಬೇರೆ ಮುಖಗಳ ಹಿಂದಿನ ನಿಜವನ್ನು ತೆರೆಯುತ್ತ ಹೋಗುವಾಗ. ಅಂತಿಮ ನಿಲುವಿನಲ್ಲಿ ಕಂಡುಕೊಳ್ಳುವ ಸ್ವಯಂ ಪ್ರಯೋಗಜನ್ಯ ಸತ್ಯವು ಹೊಚ್ಚ ಹೊಸದಾದ ಅನುಭವ ಕೊಡುತ್ತಾ ಆನಂದವನ್ನುಂಟುಮಾಡುತ್ತದೆ. ಅಂದರೆ ಅವನು ಕಂಡುಕೊಳ್ಳುವ ಸತ್ಯವು ವೈಯಕ್ತಿಕ ನಿಜದಲ್ಲಿ ಕಾಸಿ ಸೋಸಿ ಪಡೆಯುವುದಾದ್ದರಿಂದಲೇ ಅದನ್ನು ಕುರಿತು ಅವನಿಗೆ ಖಂಡತುಂಡ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಷ್ಟೇ ಅಲ್ಲ; ತನ್ನ ಅನುಭವದ ಬಗ್ಗೆ ಪೂರ್ಣ ಭರವಸೆಯೂ ಹುಟ್ಟುತ್ತದೆ. ಇದು ಒಂದು ಬಗೆಯಲ್ಲಿ ಮನುಷ್ಯನ ಜೀವನದ ಪರಿಪೂರ್ಣತೆಯ ಶೋಧವೂ ಆ ಮೂಲಕ ಬರುವ ನಿರ್ಣಯವು ಆಗಿರುವುದರಿಂದ ಇದನ್ನು ಯಾವೊಂದು ಕಾಲದ ವ್ಯಕ್ತಿಗಳಿಗೆ ಮಾತ್ರ ಮೀಸಲು ಎನ್ನಲಾಗುವುದಿಲ್ಲ. ಸ್ವಯಂ ಪೂರ್ಣತೆಗಾಗಿ ನಡೆಯುವ ಈ ಶೋಧವು ಭೌತಿಕ ಜಗತ್ತಿನ ಪೂರ್ಣತೆಯ ಕಲ್ಪನೆಯ ನಿರಾಕರಣೆಯಲ್ಲೇ ಹುಟ್ಟಿದ ಫಲಿತಾಂಶವಾಗಿ ಅದರಾಚೆ ಸಾಗುವುದರಿಂದ ಮನುಷ್ಯನು ಸಾಗಿಬಂದ ದಾರಿಯಲ್ಲೇ ಮುಂದುವರೆಯುತ್ತಿರುತ್ತದೆ. ಈ ಮೂಲಕ ಮನುಷ್ಯನ ಅಸ್ತಿತ್ವದ ಮುಂದುವರೆಕೆಗೂ ಈ ಹುಡುಕಾಟದ ಮುಂದುವರೆಕೆಗೂ ಒಂದು ನಿರಂತರತೆ ಏರ್ಪಡುತ್ತದೆ; ಪರಂಪರೆಯೇರ್ಪಡುತ್ತದೆ. ಅದರ ಒಂದು ಭಾಗವಾಗಿ ಬಂದವರೇ ಕನಕದಾಸ ಮತ್ತು ಶರೀಫರು.

ಒಂದರ ಕೊನೆಯಿಂದ ಮತ್ತೊಂದರ ಹುಟ್ಟು ಆರಂಭವಾಗುತ್ತದೆ. ಹಾಗೆ ಕನಕದಾಸ ಮತ್ತು ಶರೀಫರ ಕಾವ್ಯದ ಮಾರ್ಗ ಹೊಸ ಹಾದಿಯಲ್ಲಿ ಹೆಜ್ಜೆ ಇಡಲಾರಂಭಿಸಿತು. ಸ್ಥಗಿತ ಚೇತನರಲ್ಲದ ಕನ್ನಡ ಕವಿಗಳು ಚಲಿತ ಚೇತನರಾಗಿರುವುದರಿಂದ ಕನ್ನಡದಲ್ಲಂತೂ ಇದು ವಾಸ್ತವ. ವಚನಕಾರರ ಪ್ರಭಾವ, ವರ್ಚಸ್ಸು ಮಂಕಾಗುವ ಹೊತ್ತಿಗೆ ಕನಕದಾಸರು ಆತ್ಮ ವಿಮರ್ಶೆಯ ಬೆಳಕಿನಲ್ಲಿ ಹೊಸ ಹಾದಿಯನ್ನು ತುಳಿಯತೊಡಗಿದರು. ಅವರದು ಭಕ್ತಿ ಪ್ರಧಾನವಾದ ಕಾವ್ಯವಾದರೂ ಅದರಲ್ಲಿ ಸಾಮಾಜಿಕ,

ಧಾರ್ಮಿಕ, ಸಾಂಸ್ಕೃತಿಕ ಮತ್ತು ವಿಷಯಗಳನ್ನು ಪುನರ್ ಚಿಂತನೆಗೆ ಹಚ್ಚುವ ರೀತಿಯಲ್ಲಿ ಜೀವಪರವಾದ ಧೋರಣೆಯನ್ನು ಸಮದೂಗಿಸುವ ಎಚ್ಚರ ಕನಕದಾಸರ ಎಲ್ಲ ಸೃಜನಶೀಲ ಕೃತಿಗಳಲ್ಲಿ ವ್ಯಕ್ತವಾಯಿತು. ಹಾಗೆ ಶಿಶುನಾಳ ಶರೀಫರೂ ಆಧುನಿಕ ಪೂರ್ವಕಾಲ ಘಟ್ಟದ ಭಕ್ತಿ ಪರಂಪರೆಯ ಸಂತರಾಗಿ ಉದಯಿಸಿದರು. ಇವರು ಸಹ ಭಕ್ತಿ ತತ್ವವನ್ನು ಪ್ರಧಾನ ಆಶಯವಾಗಿ ಇಟ್ಟುಕೊಂಡರೂ, ಸಮಾಜದ ಓರೆಕೋರೆಗಳನ್ನು, ಅಂಕು ಡೊಂಕುಗಳನ್ನು, ಜಾತಿ ತಾರತಮ್ಯಗಳನ್ನು ಖಂಡಿಸುವಲ್ಲಿ ಸಮರ್ಥರಾಗಿದ್ದರು. ಹಾಡುಗಬ್ಬದ ಮೂಲಕ ಕನ್ನಡ ಕಾವ್ಯದ ಮೇಲೆ ಶರೀಫರು ಮಾಡಿದ ಪ್ರಭಾವ ಅಸಾಧಾರಣವಾದುದು. ಶಿಷ್ಟ ಸಾಹಿತ್ಯವನ್ನು ಪದ್ಯಗಂಧಿಯನ್ನಾಗಿಸಿ ಆಡುಮಾತಿನ ಬಳಕೆಯಿಂದ ಕಾವ್ಯಕ್ಕೆ ಹೊಸ ಲಯ ನಾವಿನ್ಯತೆಯನ್ನು ತಂದರು. ಭಕ್ತಿಯಿಂದ ವಿಡಂಬನೆಯವರೆಗೆ ವಸ್ತುವಿನ ಆಯ್ಕೆಯನ್ನು ವಿಸ್ತರಿಸಿದರು. ಅಲ್ಲಿಯವರೆಗೆ ಅಸ್ಪೃಶ್ಯವೆನಿಸಿದ್ದ ಎಷ್ಟೋ ವಸ್ತುಗಳು ಕಾವ್ಯ ಪ್ರವೇಶಿಸಲು ಕಾರಣವಾಯಿತು. ಬದುಕಿನ ಅನಂತ ಮುಖಗಳನ್ನು ಪರಿಚಯಿಸುವುದರ ಮೂಲಕ ಕಾವ್ಯಭಾಷೆ ಮತ್ತು ತಂತ್ರಕ್ಕೆ ಹೊಸ ಆಯಾಮವನ್ನು ತಂದುಕೊಟ್ಟರು. ವೇದ, ಉಪನಿಷತ್ತು, ನಾಥ, ಶಾಕ್ತ ಪರಂಪರೆಗಳ ತಾತ್ವಿಕ ಅಂತರ್ಮುಖತೆಗಳನ್ನು, ಜೀವನದ ವೈಶಾಲ್ಯಗಳನ್ನು ಧರ್ಮಾರ್ಥದ ಆಳವನ್ನು ಆರ್ಥೈಸುವ ಪ್ರಯತ್ನದಲ್ಲಿ ಶರೀಫರು ಮಾಡಿದ ಸಾಧನೆ ಕಡಿಮೆಯೇನಲ್ಲ.

ತಾವು ಬದುಕಿದ್ದ ಕಾಲದಲ್ಲಿ ಸಾಮಾಜಿಕ-ಧಾರ್ಮಿಕ-ಸಾಹಿತ್ಯಿಕ ಪ್ರತಿಭಟನೆಯ ಬಿರುಗಾಳಿಯನ್ನೇ ಎಬ್ಬಿಸಿದ್ದ ಕನಕದಾಸರು ವರ್ತಮಾನದ ಸಾಹಿತ್ಯಿಕ ಸಾಮಾಜಿಕ ಚರ್ಚೆಯ ಸಂದರ್ಭದಲ್ಲಿ ಅಷ್ಟೇ ಪ್ರಸ್ತುತರಾಗುತ್ತಾರೆ. ಭಾಷಾ ಸಂರಚನೆ, ವಸ್ತು-ಶಿಲ್ಪ ಮುಂತಾದ ಸಾಹಿತ್ಯಿಕ ಅಂಶಗಳಗಷ್ಟೇ ಅಲ್ಲದೆ, ಅನುಭೂತಿಯ ಪ್ರಾಮಾಣಿಕತೆ, ಬದುಕಿನ ವಾಸ್ತವತೆಯ ಬಿಗಿ ಹಿಡಿತ, ಪರಂಪರೆಯನ್ನು ಕುರಿತ ಪ್ರತಿಭಟನೆ, ನೈತಿಕತೆಗೆ ಒತ್ತು ಹೀಗೆ ಯಾವ ದೃಷ್ಟಿಯಿಂದ ನೋಡಿದರು ಕನಕದಾಸರು ಅನನ್ಯರಾಗುತ್ತಾರೆ. ಆಧುನಿಕ ವಿಮರ್ಶೆಯ ಸಂದರ್ಭದಲ್ಲಿ ಬೌದ್ಧಿಕತೆಯನ್ನು ಪ್ರಯೋಗಶೀಲತೆಯನ್ನು ಆಧುನಿಕ ಮನೋಧರ್ಮವನ್ನು ಕುರಿತು ಮಾತನಾಡುವಾಗ ಕನಕದಾಸರನ್ನು ಮಾದರಿಯಾಗಿ ಇಟ್ಟುಕೊಳ್ಳಬೇಕಾಗುತ್ತದೆ.

ಕನಕದಾಸರು ಕಾವ್ಯದಲ್ಲಿ ಮುಖ್ಯವಾಗಿ ಸೌಂದರ್ಯಬೋಧಕರಾಗಿ ಕಾಣುವುದಿಲ್ಲ. ಸತ್ಯಬೋಧಕರಾಗಿ ಕಾಣುತ್ತಾರೆ. ಅವರ ಪಾಲಿಗೆ ಸತ್ಯವೇ ಸೌಂದರ್ಯ-ಗಾಂಧೀಜಿಯ ಹಾಗೆ ಸತ್ಯವೆಂಬುದು ಅಚ್ಛಾದನೆಯಾಗೇ ಎಲ್ಲವನ್ನು ಗ್ರಹಿಸುವವರಿಗೆ ಬೆತ್ತಲೆ ಅಸಭ್ಯ. ಆದರೆ ಸತ್ಯವನ್ನು ಅದು ಇರುವ ಸ್ಥಿತಿಯಲ್ಲೇ ಅನ್ಯರ ಗಮನಕ್ಕೆ ತರಬೇಕೆಂದರೆ ಇದೊಂದೆ ಮಾರ್ಗ.

ಕನಕರದು ಬಹುಮುಖಿ ವ್ಯಕ್ತಿತ್ವ. ಅವರು ಕವಿಯೂ ಆಧ್ಯಾತ್ಮವಾದಿಯೂ ಆಗಿರುವಂತೆ ಸಾಮಾಜಿಕ ಚಿಂತಕರು ಹೌದು. ಕನಕರ ವ್ಯಕ್ತಿತ್ವದ ಒಂದು ಮಗ್ಗುಲಿಗೆ ನಿಗೂಢವಾದ ರಹಸ್ಯವಾದವಿದ್ದರೆ, ಇನ್ನೊಂದು ಮಗ್ಗುಲಿಗೆ ಸಮಾಜವಾದವಿದೆ. ಕನಕರು ಬೇರೆ ಸಾಧಕರಂತೆ ಬದುಕಿನ ಅಸ್ತಿತ್ವದ ಸಾರ್ಥಕತೆಯ ಶೋಧಕ್ಕಾಗಿಯೇ ಹೊರಟವರು ಮತ್ತು ಅದರ ಅಂತಿಮಗುರಿ ಆಧ್ಯಾತ್ಮಿಕ ಸಾಧನೆಯೆಂದೇ ಅರಿತವರು. ವ್ಯಕ್ತಿ ಜೀವನದ ಈ ಉನ್ನತ ನಿಲುವನ್ನು ನಿರಾಕರಿಸದಿದ್ದರೂ, ಆಧ್ಯಾತ್ಮದ ಅನುಭವಕ್ಕೆ ಜಾತಿ-ಮತ-ಲಿಂಗಗಳ ಬೇಧವಿರಬೇಕೆಂಬ ನಿರ್ಬಂಧವನ್ನು ನಿರಾಕರಿಸಿದವರು. ಧಾರ್ಮಿಕ ಆಧ್ಯಾತ್ಮಿಕ ಸಂವೇದನೆಯ ಮೂಲಕ ಪ್ರಚೋದಿತವಾದ ಬಿಡುಗಡೆಯ ಕಲ್ಪನೆಯಷ್ಟೇ ಸಿದ್ಧ ವ್ಯವಸ್ಥೆಯ ವರ್ಗಪ್ರಚೋದಿ ಆಕ್ರಮಣಕಾರಿ ಶೋಷಣೆಯಿಂದ ದಮನಗೊಂಡ ಮಾನಸಿಕ ಸ್ಥಿತಿಯಿಂದ ಬಿಡುಗಡೆ ಪಡೆಯುವುದು ಅವರ ಪಾಲಿಗೆ ಮಹತ್ವದ್ದಾಗಿತ್ತು. ಕನಕದಾಸರು ನಮಗೆ ಮಹತ್ವದ ವ್ಯಕ್ತಿಯಾಗುವುದು ಕೇವಲ ಭಕ್ತರಾಗಿ, ರಹಸ್ಯವಾದಿಯಾಗಿ ಇಲ್ಲವೆ ದಾರ್ಶನಿಕ ವ್ಯಕ್ತಿಯಾಗಿ ಅಲ್ಲ. ಬದಲಾಗಿ ನೆಲೆನಿಂತ ವ್ಯವಸ್ಥೆಗೆ ಸ್ಥಗಿತಗೊಂಡ ಪರಂಪರೆಗೆ ಚಾಲನೆಕೊಟ್ಟವರು, ಹೊಸ ತಿರುವು ಕೊಟ್ಟವರು. ಆದ್ದರಿಂದಲೇ ಪಂಡಿತ, ಪುರೋಹಿತರನ್ನು ಅವರು ತರಾಟೆಗೆ ತೆಗೆದುಕೊಂಡರು. ಅವರ ದೌರ್ಬಲ್ಯವನ್ನು, ಡಾಂಭಿಕತೆಯನ್ನು ಕಟುವಾಗಿ ಟೀಕಿಸಿದರು.

ಮನುಷ್ಯನ ಪರವಾಗಿ ಮಾತನಾಡಲು ಹೊರಟ ಮನುಷ್ಯನು ಮನುಷ್ಯನನ್ನೇ ವಿರೋಧಿಸಬೇಕಾಗಿ ಬರುವುದು ಮತ್ತು ಮನುಷ್ಯನು ತನ್ನ ಅಸ್ತಿತ್ವದ ರಕ್ಷಣೆಗೆ ಮನುಷ್ಯನನ್ನೇ ಬಲಿಯಾಗಿಸಹೊರಡುವುದು, ಈ ಎರಡು ವಿಪರ್ಯಾಸದ ಸಂಗತಿಗಳೇ. ವೈದಿಕ ಸಂಸ್ಕೃತಿಯ ವಿರೋಧಿಯಾಗಿ ಮೊದಲು ಸ್ವರ ಎತ್ತಿದವನು ಬುದ್ಧ, ಅನಂತರ ಮಹಾವೀರ. ಇರುಗಳಾದ ಮೇಲೆ ಶಕ್ತಿಶಾಲಿ ಧ್ವನಿಯೊಂದು ಕೇಳಬಂದದ್ದು ವಚನಕಾರರು ಮತ್ತು ಕನಕದಾಸರಿಂದ. ಮೇಲ್ನೋಟಕ್ಕೆ ಇದು ಬ್ರಾಹ್ಮಣ ವಿರೋಧಿಯಾಗಿ ಕಂಡರೂ ಜನವಿರೋಧಿಯಾದ, ಜೀವ ವಿರೋಧಿಯಾದ ಧೋರಣೆಯ ವಿರುದ್ಧದ ಪ್ರತಿಭಟನೆಯಾಗಿತ್ತು.

ಸಾಂಪ್ರದಾಯಿಕ ಸಿದ್ಧವ್ಯವಸ್ಥೆಯ ನಿರಾಕರಣೆಯನ್ನು ಕನಕದಾಸರು ಪ್ರಾರಂಭಿಸಿದ್ದು ಏಕಮುಖವಾಗಿ ಅಲ್ಲ. ಆದರೆ ಏಕವ್ಯಕ್ತಿಯಾಗಿ ಮಾತ್ರ ಹೌದು. ಪ್ರತಿಭಟಿಸಲಾಗದ ಅನೇಕರ ಪ್ರತಿನಿಧಿಯಾಗಿ ಅವರು ಸಾಮಾಜಿಕ ಪ್ರತಿಭಟನೆಯ ಧ್ವನಿಯಾಗಿದ್ದರು. ಆದರೆ ಕನಕರ ಪ್ರತಿಭಟನೆ ವ್ಯವಸ್ಥೆಯೊಂದಿಗೆ ರಾಜಿಮಾಡಿಕೊಂಡ ಕೇವಲ ತಾತ್ವಿಕ ಪ್ರತಿಭಟನೆಯಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಏಕೆಂದರೆ ಅನೇಕ ಬಾರಿ ವ್ಯವಸ್ಥೆಯ ವಿರೋಧಿಯಾದ ಮನುಷ್ಯ ಕೂಡ ಅದಕ್ಕೆ ತಕ್ಕ ಗಟ್ಟಿತನ-ಜಿಗುಟುತನವಿಲ್ಲದೆ ಹೋದರೆ ಆಶಯದಲ್ಲಿ ಮಾತ್ರ ವಿರೋಧಿಯಾಗಿ, ಕೃತಿಯಲ್ಲಿ ವಿರೋಧಿಸಲಾರದೆ ಹೋಗುತ್ತಾರೆ. ಬರಹದಲ್ಲಿ ಪ್ರತಿಭಟಿಸಿದರೂ ಬದುಕಿನಲ್ಲಿ ಪ್ರತಿಭಟಿಸುವುದಿಲ್ಲ. ಇಂಥ ಬದುಕು ಕನಕದಾಸರಲ್ಲಿ ಇರಲಿಲ್ಲವೆಂದೇ ಹೇಳಬೇಕು. ಬಹುಶಃ ಇದು ಎಂಥವನಿಂದ ಸಾಧ್ಯವಾಗುವುದೆಂದರೆ, ಏಕಕಾಲಕ್ಕೆ ಒಳಗೂ-ಹೊರಗೂ ಸಂವಾದ ಸ್ಥಾಪಿಸಿಕೊಳ್ಳಬಲ್ಲವನಲ್ಲಿ ಮಾತ್ರ. ಅಂದರೆ ಕನಕದಾಸರು ಬಹಿರಂಗದ ಸಮುದಾಯದೊಡನೆ ಸಂವಹನಿಸುವ ಕ್ಷಣಗಳಲ್ಲೇ ತಮ್ಮ ಅಂತರಂಗದೊಡನೆಯೂ ಸಂವಾದಿಸಬಲ್ಲವರಾಗಿದ್ದರಿಂದ ಇಂಥ ದ್ವಂದ್ವದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿರಬೇಕು.

ಕನಕದಾಸರು ಬದುಕಿನಲ್ಲಿ ಅನುಭವಿಸಿದ ನೋವು ತಿರಸ್ಕಾರ ಅವಮಾನಗಳು ಅವರ ವ್ಯಕ್ತಿತ್ವಕ್ಕೆ ಪುಟವಿಕ್ಕಿದ್ದು ನಿಜ. ಅವರು ಜೀವನದಲ್ಲಿ ಉಂಡ ಕಹಿಯನ್ನು ಮಾತಿನಲ್ಲಿ ಉಗುಳಿದವರು. ಅದು ಕೇವಲ ನೊಂದ ಜನಾಂಗದ ದನಿಯಾಗದೇ ಸಮಸ್ತ ಸಾಧಕರಿಗೆ ದಿಕ್ಸೂಚಿಯಾದದ್ದು ನಿಜ. ಪ್ರತಿಭಟನೆಯ ಫೂತ್ಕಾರ ಮಾಡಿದ ಕನಕದಾಸರದು ಸಂಪೂರ್ಣ ನಕಾರಾತ್ಮಕ-ನಿಷೇಧಾತ್ಮಕ ನಿಲುವಲ್ಲ. ಉತ್ತಮ ಬದುಕಿಗೆ ಸ್ವೀಕಾರಾರ್ಹವಾದುದು. ಎಲ್ಲಿಂದಲೇ ಬರಲಿ ಅದನ್ನು ಒಪ್ಪಿಕೊಳ್ಳಲು ಹಿಂಜರಿಯದವರಲ್ಲ. ಒಂದು ರೀತಿಯಲ್ಲಿ ಕನಕದಾಸರು ಸರ್ವಮತಪಂಥಗಳ ಸಾರಾಗ್ರಹಿ. ಈ ಶೋಷಕ ಗುಣವೇ ಶೋಷಕ ಪ್ರವೃತ್ತಿಯ ವಿರುದ್ಧ ಸೆಡ್ಡು ಹೊಡೆಯುವಂತೆ ಮಾಡಿದ್ದು.

ಕನಕದಾಸರ ಮಾತುಗಳಲ್ಲಿನ ಸತ್ಯ ಎಷ್ಟು ಸರಳ ಮತ್ತು ನೇರವೆಂದರೆ ಅದರಲ್ಲಿ ಯಾವುದೇ ಬಗೆಯ ಅಸ್ಪಷ್ಟತೆಗೆ ದ್ವಂದ್ವಕ್ಕೆ ಅವಕಾಶವಿಲ್ಲ. ಯಾಕೆಂದರೆ ಅವರು ಹೇಳುವಂತೆ ಎಲ್ಲಾ ಮನುಷ್ಯನೂ ಹುಟ್ಟುವಾಗ ಪೂರ್ಣ ಸ್ವತಂತ್ರ. ಎಲ್ಲರ ಹುಟ್ಟು ಒಂದೇ ಬಗೆಯದು. ಹುಟ್ಟಿನ ಕ್ರಿಯೆ ಮತ್ತು ಹುಟ್ಟಿನ ವಿಧಾನಗಳು ವಿಶ್ವದ ಎಲ್ಲಾ ಮಾನವರಲ್ಲಿ ಸಮಾನವಾಗಿರುವಾಗ ಹುಟ್ಟಿನ ಆನಂತರ ಅವರಲ್ಲಿ ಬೇಧಭಾವ ಬರುವುದೇಕೆ? ಜಾತಿ-ಮತ-ವರ್ಣ-ವರ್ಗ-ಪಂಥಗಳು ಸರಪಳಿಯ ಬಿಗಿತಗಳಲ್ಲಿ ಹುಟ್ಟಿದ ಆನಂತರ ಅವನನ್ನು ಬಿಗಿದು ಬೇರ್ಪಡಿಸುತ್ತವೆ. ಶ್ರೇಣೀಕೃತ ಸಮಾಜವ್ಯವಸ್ಥೆಯಲ್ಲಿ ಒಂದು ಶ್ರೇಣಿಯನ್ನು ಹುಟ್ಟಿನಿಂದ ಪ್ರವೇಶಿಸಿದ ಮೇಲೆ ಅವನು ಇನ್ನೊಂದು ಶ್ರೇಣಿಯನ್ನು ಪ್ರವೇಶಿಸಲಾರ. ಅರಿವು-ಅನುಭವ, ಸ್ಥಾನ-ಮಾನ, ಸಂಪತ್ತು, ಅಧಿಕಾರ ಯಾವುದೂ ಅವನನ್ನು ಹುಟ್ಟಿನ ಮೂಲಕ ಬರುವ ಜಾತಿ-ಮತಗಳ ಚೌಕಟ್ಟಿನಿಂದ ಬೇರ್ಪಡಿಸಲಾರದು. ಆದರೆ ಯಾಕೆ ಈ ವ್ಯತ್ಯಾಸ? ಭಕ್ತಿಗೆ ಈ ಯಾವ ಸಾರ್ಥಕ್ಯವೂ ಇಲ್ಲ. ಭಕ್ತಿಗೆ ಎಲ್ಲರೂ ಒಂದೇ. ಅರಿಶಿಣದ ಬಣ್ಣ ಹಳದಿ, ಸುಣ್ಣದ ಬಣ್ಣ ಬಿಳಿ. ಆದರೆ ಅವೆರಡು ಸೇರಿದಾಗ ಕೆಂಪುವರ್ಣವಾಗುವಂತೆ, ಜಾತಿ-ಬಣ್ಣ ಯಾವುದೇ ಇರಲಿ ಭಕ್ತಿಯ ಸ್ಪರ್ಶವಾದ ಭಕ್ತರೆಲ್ಲ ಒಂದೇ ವರ್ಣದವರು. ಉಳಿದೆಲ್ಲವನ್ನು

ಅರಗಿಸಿಕೊಂಡು ಅದ್ದುವಷ್ಟು ವಿಚಿತ್ರಶಕ್ತಿಯಿದೆ ಭಕ್ತಿಗೆ. ಹೀಗೆ ಕನಕದಾಸರು ತೋರಿದ ಭಕ್ತಿಮಾರ್ಗವೆಂದರೆ ಭಕ್ತಿಯ ಸಾಮಾಜೀಕರಣ. ಈ ಮೂಲಕ ಒಂದು ಹೊಸ ಸಮಾಜಸೃಷ್ಟಿಯನ್ನು ಬಯಸುತ್ತಾರೆ. ಅದು ಸಾಮಾನ್ಯ ಜನರ ಸಾಮಾಜಿಕ ಕೆಳಸ್ತರದ ಪರಿತ್ಯಕ್ತವರ್ಗದ, ಅವಹೇಳನೆಗೆ, ತಿರಸ್ಕಾರಕ್ಕೆ ಒಳಗಾದ ನಿರೀಕ್ಷಿತ ಜನಾಂಗವನ್ನು ಎಚ್ಚರಿಸಿ ಮೇಲಕ್ಕೆತ್ತುವ ದೃಷ್ಟಿ ಅವರ ಸಮಾಜ ಸೃಷ್ಟಿಯ ಹಿಂದಿನ ಗುರಿ.

ಕನಕದಾಸರು ಇತರರಂತೆ ಜ್ಞಾನ-ಭಕ್ತಿ ವೈರಾಗ್ಯಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಏರುತ್ತ ಜನಸಾಮಾನ್ಯರಿಂದ ದೂರವಾಗಿ ಅಲೌಕಿಕ ಮಹಾಪುರುಷರೆಂಬಂತೆ ಎತ್ತರದಲ್ಲಿ ಮೆರೆದವರಲ್ಲ. ವಾಸ್ತವಕ್ಕೆ ಮತ್ತು ವರ್ತಮಾನಕ್ಕೆ ಸದಾ ಹತ್ತಿರವಾಗಬಲ್ಲ ಜನತೆಯ ಕವಿ.

ಇನ್ನು ಶರೀಫ್ ಸಾಹೇಬರು ತುಂಬ ಇತ್ತೀಚಿನವರು ಕೇವಲ ಎರಡು ಶತಮಾನದಷ್ಟು ಹಿಂದಿನವರು. ಆದ್ದರಿಂದ ಅವರು ಪರಿಚಿತರೂ ಆಪ್ತರು ಪ್ರಸ್ತುತರೂ ಆಗುವ ಸಂದರ್ಭಗಳು ಹೆಚ್ಚು. ಯಾಕೆಂದರೆ ಇಂದಿಗೂ ಅವರ ಪದಗಳು ಜನತೆಯ ನಾಲಿಗೆಯ ಮೇಲೆ ನಲಿಯುವಷ್ಟು ಪ್ರಚಲಿತವೂ ಜನಪ್ರಿಯವೂ ಆಗಿದೆ. ಜನರಲ್ಲಿ ಅವರ ಬಗೆಗಿನ ಭಕ್ತಿ-ಭಯಗಳು ಇನ್ನು ಜಾಗೃತವಾಗಿಯೇ ಇವೆ. ಹಿಂದೂ-ಮುಸ್ಲಿಂ ಭಾವೈಕ್ಯದ ಹರಿಕಾರರಾಗಿ ಎರಡು ಧರ್ಮದವರ ಆದರ ಪ್ರೀತಿಗಳಿಗೆ ಪಾತ್ರರಾಗಿ, ಎರಡೂ ಧರ್ಮದ ತತ್ವಗಳನ್ನು ಸಮಾನ ನೆಲೆಯಲ್ಲಿ ವ್ಯಾಖ್ಯಾನಿಸಿ ಸಮನ್ವಯದ ತಂತುಗಳಲ್ಲಿ ಹಿಂದೂ-ಮುಸ್ಲಿಂರನ್ನು ಬಿಗಿದವರು. ಸಗುಣ-ನಿರ್ಗುಣಗಳೆರಡರ ಆರಾಧನೆಯನ್ನು ಕುರಿತು ಪದಗಳನ್ನು ಹಾಡಿದರು. ಅವರದು ನಿರ್ಗುಣ ಸಾಧನೆಯ ಮಾರ್ಗವೇ ತಮ್ಮ ಪದಗಳಲ್ಲಿ ಸಗುಣ ಪೂಜೆಯನ್ನು ಬೆಂಬಲಿಸಿದಂತೆ ಕಾಣುವುದರಿಂದ ಸಾಮಾನ್ಯ ಜನರಿಗೂ ಎಲ್ಲ ಒಲವಿನ ಜನರಿಗೂ ಪ್ರಿಯವಾಗುತ್ತ ಅದ್ವೈತದ ನಿರ್ಗುಣ-ನಿರಾಕಾರದ ಸಾಧನೆಯನ್ನು ಯೋಗ-ಜ್ಞಾನ-ಭಕ್ತಿ-ಶಾಕ್ತ ಮಾರ್ಗಗಳನ್ನು ತಮ್ಮ ಹಾಡಿನಲ್ಲಿ ಪ್ರಸ್ತಾಪಿಸಿ ತಮ್ಮ ಅಸಾಧಾರಣ ದಾರ್ಶನಿಕ ನಿಲುವನ್ನು ಪ್ರಕಟಿಸಿದವರು. ಅಲ್ಲದೆ ತನ್ನ ಕಾವ್ಯ ಯಾರನ್ನಾದರೂ ಮೆಚ್ಚಿಸಬೇಕೆಂಬ ಅಪೇಕ್ಷೆಯಾಗಲಿ, ಯಾವುದೋ ಸ್ಥಾನಮಾನ ಗಿಟ್ಟಿಸಿಕೊಳ್ಳುವ ಚಪಲವಾಗಲಿ, ಯಾರ ವಿರೋಧವನ್ನಾದರೂ ಕಟ್ಟಿಕೊಂಡೇನೆಂಬ ಭಯವಾಗಲಿ ಶರೀಫರಿಗೆ ಇಲ್ಲ. ಅವರ ಪದಗಳಲ್ಲಿ ಬುದ್ಧಿಪೂರ್ವಕ ಕಲಾತ್ಮಕ ಎಚ್ಚರವಾಗಲಿ, ಶಾಬ್ಧಿಕ ಕಸರತ್ತಾಗಲಿ, ಪದವಿಲಾಸದ ಜಾಣ್ಮೆಯಾಗಲಿ ಕಂಡುಬರುವುದಿಲ್ಲ.

ಶರೀಫ್ ಸಾಹಿತ್ಯ ಹೊತ್ತಗೆಯಲ್ಲಿ ಅವಿತುಕೊಂಡು ಗ್ರಂಥಾಲಯದ ಬೀರುಗಳಲ್ಲಿ ಅಲಂಕಾರವಾಗಿ ಕುಳಿತು ಶಾಶ್ವತತೆಯನ್ನು ಪಡೆದುದಲ್ಲ. ಜನತೆಯ ನಾಲಗೆಯ ಮೇಲೆ ಸದಾ ಆಸರೆ ಪಡೆದ ಅವುಗಳ ಭಾಷೆಯೂ ಸಾಮಾನ್ಯ ಜನತೆಯದೆ. ಆ ಕಾಲಕ್ಕಾಗಲೇ ಪರಿಚಿತವಾದ ದಾಸರ ಶಿವಯೋಗಿಗಳ ಪದಗಳ ದೇಶೀಯ ಛಂದಸ್ಸನ್ನೇ ತಮ್ಮ ಹಾಡಿಗಾಗಿ ಆಯ್ಕೆ ಮಾಡಿಕೊಂಡದ್ದು ಅವರ ವೈಶಿಷ್ಟ್ಯ. ಸಾಮಾನ್ಯ ಜನರಿಗೆ ಬೇಕಾಗಿದ್ದು ತಮ್ಮ ಅರಿವು ಅನುಭವಗಳಿಗೆ ನಿಲುಕುವ ಸಾಹಿತ್ಯ ವಾಸ್ತವ ಬದುಕಿಗೆ ಹತ್ತಿರವಾದ ಸಾಹಿತ್ಯ. ಬದುಕಿನಿಂದ ದೂರನಿಲ್ಲುವ ಘೋಷಣೆಗಳೋ, ಸಾಂದರ್ಭಿಕ ತುರ್ತಿನಲ್ಲಿ ಬರೆದ ಸ್ಲೋಗನ್ನುಗಳೋ ಆಗದೆ ಪರಿಚಿತ ಬದುಕಿನಿಂದ ಸ್ಫೂರ್ತಿಗೊಂಡಿದ್ದು. ಶರೀಫ ಕೂಡ ಕನಕದಾಸರಂತೆ ಶಬ್ದಗಳ ಮೋಡಿಕಾರ. ಪದಗಳ ನಾಡಿಮಿಡಿತ ಅವರಿಗೆ ಚೆನ್ನಾಗಿ ಗೊತ್ತು. ಜನತೆಯ ಭಾಷೆಯಲ್ಲಿ ತಮ್ಮ ಅನುಭವಗಳನ್ನು ಮುಟ್ಟಿಸುವ ಕಾರ್ಯದಲ್ಲಿ ಅವರಷ್ಟು ಸಫಲರಾದ ಕವಿಗಳು ಕಡಿಮೆ. ಒಂದು ರೀತಿಯಲ್ಲಿ ಕಾವ್ಯದ ಸಾಧ್ಯತೆಗಳ ಶೋಧಕರು ಅವರು. ಜನಪದ ಧಾಟಿಯ ಹಾಡುಗಾರಿಕೆಯನ್ನು ತಮ್ಮ ಉದ್ದೇಶಕ್ಕಾಗಿ ಬಳಸಿಕೊಂಡ ಪ್ರಯೋಗಶೀಲರು. ಆಡುಮಾತಿನ ಸೊಗಡನ್ನು ಒರಟುತನವನ್ನು ಉಳಿಸಿಕೊಂಡರೂ ಪರಂಪರೆಗೆ ಹೊಸ ರೂಪ ಕೊಟ್ಟವರು.

"ನಿಜವಾದ ಕವಿ ಒಂದು ಕಾಲದೊಳಗಿದ್ದೇ ಕಾಲವನ್ನು ಮೀರುತ್ತಾನೆ. ಒಂದು ಸಮಾಜದ ನಡುವೆ ಬದುಕಿದ್ದು ವಿಶ್ವ ಸಮುದಾಯಕ್ಕೂ ಅರ್ಥಪೂರ್ಣವೆನಿಸುತ್ತಾನೆ. ಒಂದು ಕಾಲದ ಭಾಷೆಯಲ್ಲಿ ಬರೆಯುವಾಗಲೇ ತನ್ನ ಅಭಿವ್ಯಕ್ತಿ ಸಾಮರ್ಥ್ಯದಿಂದಾಗಿ ಮುಂದಿನವರೆಗೂ ಗಮನಾರ್ಹನೆನಿಸುತ್ತಾನೆ. ಕವಿಯ ನಿಜವಾದ ಸತ್ವಪರೀಕ್ಷೆ ನಡೆಯುವುದು ಅವನು ಆತ್ಮೀಯವಾಗಿ ಬರೆಯಲು ಪ್ರಯತ್ನಿಸಿದಾಗ ಮನರಂಜನೆಯ ಸಾಧನವೂ ಆಗಬಹುದು. ಕಾವ್ಯ ರಚನಾ ಕೌಶಲಗಳೆಲ್ಲ ಕಿಂಚಿತ್ತೂ ತೋರಿಕೆಯಲ್ಲದಂತೆ ಗುಪ್ತವಾಗಿ ಜೀವನಾನುಭವವನ್ನು ಶೋಧಿಸಲು ದುಡಿಯುವಾಗ ಮಾತ್ರ ಕಾವ್ಯ ನೈತಿಕ ಆಯಾಮ ಪಡೆದು ಜೀವನ ಸಾರ್ಥಕತೆಯ ಹುಡುಕಾಟವಾಗುತ್ತದೆ"[೨]

ಶರೀಫ್ ಸಾಹಿತ್ಯವು ಜನವಾದಿಯಾಗಿ ಕ್ರಾಂತಿಕಾರಿಯಾಗಿ ಜನಸಾಮಾನ್ಯರ ಅಂತರಂಗವನ್ನು ಮೀಟಿದ್ದು ಸುಳ್ಳಲ್ಲ. ಧರ್ಮ ಆಧ್ಯಾತ್ಮಗಳ ಅಮಲನ್ನು ಮೀರಿನಿಂತ ಸಾಮಾನ್ಯ ಜನರ ಅಜ್ಞಾನ ಮೌಢ್ಯಗಳನ್ನೆ ಬಂಡವಾಳವಾಗಿಸಿಕೊಂಡು ಸುಲಿಯುವ ಧರ್ಮಪ್ರಚಾರಕರ ವಿರುದ್ಧ, ಪೊಳ್ಳು ವೇದಾಂತಿಗಳ ವಿರುದ್ಧ ಕೂಗೆಬ್ಬಿಸಿದ ದನಿ ಅದು. ಆದ್ದರಿಂದಲೇ ಧಾರ್ಮಿಕ ಕಂದಾಚಾರಗಳು ತತ್ವವನ್ನು ಮರೆತ ಆಚರಣೆಗಳು ಕಟು ಟೀಕೆಗೆ ಒಳಗಾದವು. ಹಾಗೆಂದು ನಿಜವಾದ ಧಾರ್ಮಿಕತೆಯ ನೈತಿಕತೆಯ, ಆಧ್ಯಾತ್ಮಿಕತೆಯ ಮೌಲ್ಯಗಳನ್ನು ಎತ್ತಿ ತೋರಿಸುವಲ್ಲಿ ಶರೀಫ ಹಿಂದೆ ಬಿದ್ದವರಲ್ಲ. ಅಷ್ಟೇ ಅಲ್ಲ ಆಧ್ಯಾತ್ಮಿಕ ಸಾಧನೆಗೆ ಪ್ರತಿಯೊಬ್ಬರೂ ಲಿಂಗ-ಜಾತಿ-ಮತಗಳ ಬೇಧವಿಲ್ಲದೆ ಸಮಾನ ಹಕ್ಕುದಾರರೆಂದು ಸಾರಿದ್ದು ಅವರ ವಿಶೇಷತೆ.

ಕನಕದಾಸರಂತೆಯೇ ಶರೀಫರು ಅರ್ಥಹೀನ ಸಾಂಪ್ರದಾಯಿಕತೆಗಳ ವಿರುದ್ಧ ಪ್ರತಿಭಟನೆಯ ಕಿಡಿ ಕಾರಿದ್ದರೂ ಇಂದು ಮತ್ತೆ ಜನ ಅದೇ ಜಡ್ಡುಬಿದ್ದ ಜಾಡಿಗೆ ಸೇರುತ್ತಿರುವುದು ವಿಪರ್ಯಾಸ. ತತ್ವವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾದರೂ ಆಚರಣೆಯ ಸ್ವರೂಪ ಪಡೆದು ಆನಂತರ ತತ್ವ ಹಿಂದಾಗಿ ಆಚರಣೆಯೆ ಮುಂದಾಗಿ ಬಿಡುವುದು ಸಾಮಾನ್ಯ. ಈ ಬಗೆಯ ಶುಷ್ಕ ಆಚರಣೆ ಬಗೆ ಬಗೆಯ ಬಡಿದಾಟಕ್ಕೂ ಕಾರಣವಾಗುವುದುಂಟು. ಶರೀಫರು ತಮ್ಮ ಜೀವನದಲ್ಲಿ ಸ್ವಯಂ ಇದರ ನೋವನ್ನು ಉಂಡವರೇ. ಮತಾಚರಣೆಗಳ ಕುರುಡು ಅನುಕರಣೆಯನ್ನು ಟೀಕಿಸಿದ ಶರೀಫ ಎಲ್ಲಾ ವಿವಿಧತೆಗಳನ್ನು ಮೀರಿ ಏಕತೆಯನ್ನು ಸಾರಿದರು. ದೈವಾನುಗ್ರಹ, ದೈವ ಸಾಕ್ಷಾತ್ಕಾರವೆನಿಸುವುದು ಆತ್ಮಾನುಭವದ ಮೂಲಕ ಲಭ್ಯವಾಗುವ ತನ್ನ ನಿಜದ ಅರಿವೇ ಆಗಿದೆ. ತನ್ನಲ್ಲಿಯೆ ಸತ್ಯದ ಸ್ವರೂಪವನ್ನು ಕಂಡ ಮೇಲೆ ಇನ್ನೊಬ್ಬರಲ್ಲಿಯೂ ಅದನ್ನೆ ಕಾಣಲು ಸಾಧ್ಯವಾಗಿ, ಅಂತಹದೇ ಉಳಿಯದ ಏಕತೆ ಸಿದ್ಧಿಸುತ್ತದೆ. ಇದು ಸಾಧ್ಯವಾದಾಗ ವ್ಯಕ್ತಿ ವ್ಯಕ್ತಿಗಳ ನಡುವೆ ಬೇಧವೆಲ್ಲಿ? ಸ್ಪರ್ಧೆಯೆಲ್ಲಿ?

ಶರೀಫರ ಸಮಕಾಲೀನ ಸಾಧನೆ ಮತ್ತು ಪ್ರಸ್ತುತತೆಯನ್ನು ಎರಡು ಬಗೆಯಿಂದ ಪರಿಶೀಲಿಸಬಹುದು. ಮೊದಲನೆಯದು; ಆಧುನಿಕ ಜಗತ್ತಿನ ಭೌತಿಕ ತೊಳಲಾಟಗಳಲ್ಲಿ ದಾಹಗಳಲ್ಲಿ ಕಂಗೆಟ್ಟ ಜನರಿಗೆ ಭಕ್ತಿಮಾರ್ಗದ ಮೂಲಕ ಶಾಂತಿ ನೆಮ್ಮದಿಗಳನ್ನು ದೊರಕಿಸಿಕೊಡುವುದು. ಅಂದರೆ ಆಧ್ಯಾತ್ಮದ ಆನಂದಭೂತಿಯು ಶ್ರೇಣಿಕೃತ ಸಮಾಜದ ಕೆಲವರ ಸೊತ್ತಾಗದೆ ಎಲ್ಲರ ತುತ್ತಾಗುವಂತೆ ನೋಡಿಕೊಳ್ಳುವ ಸಾಮಾಜೀಕರಣದ ಪ್ರಕ್ರಿಯೆ. ಎರಡನೆಯದು; ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಅಮಾಯಕ ಜನರ ಭಾವನೆಗಳನ್ನು ಕೆರಳಿಸಿ ಬೇಳೆ ಬೇಯಿಸಿಕೊಳ್ಳುವ ಇಂದಿನ ದಿನಗಳಲ್ಲಿ ಸರ್ವಧರ್ಮ ಸಮನ್ವಯದ ಸಾಮರಸ್ಯದ ಬೋಧನೆಯ ಮೂಲಕ ಶಾಂತಿಯನ್ನು ಸ್ಥಾಪಿಸುವುದು.

ಶರೀಫ ಸಾಹೇಬರು ಸಮಕಾಲೀನ ಬದುಕಿಗೆ ಇಂದಿಗೂ ಸಲ್ಲುವಂತವರು. ಅವರ ಜೀವನ ಸಿದ್ಧಾಂತ ಮತ್ತು ಆಚರಣೆ ಹಾಗೂ ಅಭಿವ್ಯಕ್ತಿಗಳು ಮುಪ್ಪುರಿಗೊಂಡು ನಿಜದಲ್ಲಿ ನಿಷ್ಠುರ ಅಗ್ನಿದಿವ್ಯದಲ್ಲಿ ಸಾಬೀತಾದ ಪರಿಶುದ್ಧ ಜೀವನಾನುಭವದಲ್ಲಿ, ಲೌಕಿಕ

ಅನುಭವವನ್ನು ಮೀರಿ ನಿಂತ ಸ್ವಾನುಭವ, ಜನ್ಮತಾತ್ವಿಕತೆಯ ಉನ್ನತಿ ಎಲ್ಲಕ್ಕಿಂತ ಮುಖ್ಯವಾಗಿದ್ದು. ಎಲ್ಲಾ ಕಂದಾಚಾರಗಳನ್ನು ಬೂಟಾಟಿಕೆಯನ್ನು ಮೀರಿನಿಂತ ಮಾನವೀಯ ದೃಷ್ಟಿ ಹಾಗೂ ಬೋಧಿಸಿದಂತೆ ಬದುಕಿದ್ದು ಅವರ ಹೆಚ್ಚುಗಾರಿಕೆ.

ಯಾವುದೇ ಒಬ್ಬ ನಿಜವಾದ ಕವಿ ಎಲ್ಲಾ ಕಾಲಕ್ಕೂ ಸಲ್ಲುವಂತಾಗುವುದಕ್ಕೆ ಈ ಮಾತನ್ನು ಲಕ್ಷಿಸೋಣ; "ಭೂತ–ಭವಿಷ್ಯತ್ತುಗಳೆರಡನ್ನೂ ವರ್ತಮಾನದಲ್ಲಿ ಸೇರಿಸಿ ತೋರುವವನು ಮಹಾಕವಿ. ಇಂಥ ಕಾರ್ಯ ಮಾಡಬೇಕಾದರೆ ಕವಿಯು ಜನಜೀವನದ ಮರ್ಮವನ್ನು ಹುಡುಕಿ ಯೋಚನೆ ಮಾಡಬೇಕು. ಕಾವ್ಯ ಚರಿತ್ರೆ ವಿನೋದಕ್ಕಲ್ಲ ಮನಃಪರಿಪಾಕಕ್ಕೆ. ಆ ಪರಿಪಾಕವಾಗಬೇಕಾದರೆ ಕಾವ್ಯದಲ್ಲಿ ಒಂದು ಕಾವು ಇರಬೇಕು. ಈ ಕಾವು ಜೀವನ ವಿಮರ್ಶೆಯಿಂದ ಹುಟ್ಟುತ್ತದೆ. ಜೀವನದಲ್ಲಿರುವ ಒಂದು ಕೊರತೆಯನ್ನು ಬಿಚ್ಚಿ ತೋರಿಸಿ ನಮ್ಮನ್ನು ಕೊರಗಿಸುತ್ತಲೂ ಇರಬೇಕಾದ ಒಂದು ಸೊಬಗನ್ನು ಬಣ್ಣಿಸಿ ಆಸೆ ತುಂಬುತ್ತಲೂ ಜೀವಲೋಕವನ್ನು ಇನ್ನೊಂದು ಪುಟಕ್ಕೆ ಹಾಕುವುದೇ ಕವಿಯ ಕೆಲಸ ಈ ಕೆಲಸವನ್ನು ಅವನು ಮಾಡಬೇಕಾದರೆ ಅವನ ಬಳಿ ಒಂದು ಜೀವನ ಸಿದ್ಧಾಂತದ ಅಗ್ಗಷ್ಟಿಕೆ ಇರಬೇಕು"[೩]

## ಕೊನೆ ಟಿಪ್ಪಣಿಗಳು


೧. ಮಾತೆಲ್ಲ ಜ್ಯೋತಿರ್ಲಿಂಗ, ಪುಟ ೩೪–೩೭.

೨. ಲಕ್ಷ್ಮೀನಾರಾಯಣಭಟ್ಟ ಎನ್.ಎಸ್., "ಸುಳಿ", ಸಂಕಲನ, ಮುನ್ನುಡಿ.

೩. ಗುಂಡಪ್ಪ ಡಿ.ವಿ., "ಜೀವನ ಸೌಂದರ್ಯ ಮತ್ತು ಸಾಹಿತ್ಯ", ಡಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ಪುಟ ೭೨.